ದಿಃ 28-01-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಪ್ರತಿವಾದಿ ನಂಃ4 ರಿಂದ 6 ಪರ ವಕೀಲರಾದ ಶ್ರೀ ಎನ್.ಎಸ್. ಇವರಿಂದ ಪಾಟೀ ಸವಾಲುಃ

ದಾವೆಯ 2ನೇ ವಾದಿ ಕೆ.ಆರ್. ಗೋವಿಂದಪ್ಪ ನನ್ನ ತಮ್ಮನಾಗಬೇಕು. ನನ್ನ ತಂದೆಯ ಹೆಸರು ರಂಗನಾಥ. ನನ್ನ ತಂದೆಯವರು ಜೀವಂತ ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಈ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಬೆಂಗಳೂರಿನ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಫ್.ಎ. ನಂಃ 86/2012 ಚಾಲ್ತಿಯಲ್ಲಿ ಇದೆ ಅಂದರೆ ಸರಿ. ಆ ಪ್ರಕರಣದಲ್ಲಿ ನಾನು, ಪ್ರಸ್ತುತ ವಾದಿ ನಂಃ2 ಹಾಗೂ ನನ್ನ ತಂದೆ ಅವಶ್ಯಕ ಪಕ್ಷಕಾರರು ಎಂಬ ಅಂಶವನ್ನು ಮಂಡಿಸಿ ಒಂದು ಮಧ್ಯಂತರ ಅರ್ಜಿ ಸಲ್ಲಿಸಿರುತ್ತೇವೆ ಅಂದರೆ ಸರಿ. ಸದರಿ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯದವರು ಪುರಸ್ಕರಿಸಿ ಮೂವರನ್ನು ಅವಶ್ಯಕ ಕಕ್ಷಿಗಾರರನ್ನಾಗಿ ಆ ಪ್ರಕರಣದಲ್ಲಿ ಸೇರ್ಪಡೆ ಮಾಡಿರುತ್ತಾರೆ ಅಂದರೆ ಸರಿ. ಆ ಪ್ರಕರಣದಲ್ಲೂ ಪ್ರಸ್ತುತ ದಾವೆಯಲ್ಲಿರುವ ದಾವೆ ಸ್ವತ್ತಿನ ಮಾಲೀಕರು ನಾವೇ ಎಂದು ಹೇಳಿಕೊಂಡು ಸ್ವತ್ತು ನಮಗೆ ಸೇರಬೇಕೆಂದು ವಾದಿಸಿರುತ್ತೇವೆ ಅಂದರೆ ಸರಿ. ಆ ಪ್ರಕರಣ ಇನ್ನೂ ತೀರ್ಮಾನ ಆಗಿಲ್ಲ ಅಂದರೆ ಸರಿ. ಆ ಪ್ರಕರಣ ತೀರ್ಮಾನ ಆಗುವುದಕ್ಕಿಂತ ಇದನ್ನು ಈ ದಾವೆ ಸಲ್ಲಿಸಿರುತ್ತೇವೆ ಅಂದರೆ ಸರಿ.

2. ನಮ್ಮ ತಂದೆಯ ತಂದೆ ಅಂದರೆ ಅಜ್ಜ ಗೋವಿಂದಪ್ಪ ಅಂದರೆ ಸರಿ. ಗೋವಿಂದಪ್ಪ ಈತನ ತಂದೆ ಹನುಮಂತಪ್ಪ. ಹನುಮಂತಪ್ಪ ಇವರು 1986 ರಲ್ಲಿ ತೀರಿಕೊಂಡಿರುತ್ತಾರೆ. ಆತನ ಮಗನಾದ ನಾಗರಾಜಪ್ಪ ಜೀವಂತ ಇರುತ್ತಾನೆ. ಅವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. 1966 ರಲ್ಲಿ ಪಾಲು ವಿಭಾಗ ಆಗಿರುತ್ತದೆ ಅದರ ಪ್ರಕಾರ ನನ್ನ ಅಜ್ಜನ ತಮ್ಮನಾದ ಹನುಮಂತಪ್ಪ ಈತನದು ಐದು ಎಕರೆ ಇದೆ ಅಂದರೆ ಸರಿ. ಸದರಿ ಐದು ಎಕರೆ ಜಮೀನಿಗೂ ಸಹ ನಾವೇ ಮಾಲೀಕರು ಎಂದು ಈ ದಾವೆಯಲ್ಲಿ ಹೇಳಿರುತ್ತೇವೆ ಅಂದರೆ ಸರಿ. ಮೇಲ್ಕಂಡ ಹನುಮಂತಪ್ಪನಾಗಲೀ ಅಥವಾ ಆತನ ಮಗ

ನಾಗರಾಜಪ್ಪನಾಗಲೀ ಐದು ಎಕರೆ ಜಮೀನಿಗೆ ಸಂಬಂಧಪಟ್ಟಂತೆ ನನ್ನ ತಂದೆಯ ಹೆಸರಿನಲ್ಲಾಗಲೀ ಅಥವಾ ನಮ್ಮ ಹೆಸರಿನಲ್ಲಿಯಾಗಲೀ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿರುವುದಿಲ್ಲ.

ಈ ಸಮಯದಲ್ಲಿ ಪ್ರತಿವಾದಿ ನಂ:4 ರಿಂದ 6 ಪರ ವಕೀಲರಾದ ಶ್ರೀ ಎನ್.ಎಸ್. ಇವರು ಮುಂದಿನ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.